**_5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ._**

**ಎಸ್ ಸಿ ಕೇಸ್ ನಂ. 78/2019**

ಪ್ರಾ.ಸಾ. 9

ಚಾ.ಸಾ. 17

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 08.10.2024**

| | |
|---|---|
| ಸಾಕ್ಷಿದಾರರ ಹೆಸರು | ಸಿದ್ದೇಗೌಡ |
| ತಂದೆಯ ಹೆಸರು | ಚಿಕ್ಕ ಹೊನ್ನೇಗೌಡ |
| ವಯಸ್ಸು | 48 ವರ್ಷ |
| ಉದ್ಯೋಗ | ಹಾಲಿನ ಡೈರಿ ಕೆಲಸ |
| ವಾಸ | ಚೊಟ್ಟನಹಳ್ಳಿ ಗ್ರಾಮ |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1. ಚಾಸಾ.1 ನನ್ನ ನಾದಿನಿ, ಚಾಸಾ.2 ನನ್ನ ಮಾವ, ಚಾಸಾ.3 ನನ್ನ ಅತ್ತೆ. ನ್ಯಾಯಾಲಯದ ಮುಂದಿರುವ ಆರೋಪಿ ಗೊತ್ತು. ಸದರಿಯವರು ಚಾಸಾ.1 ರವರ ಗಂಡ. ಅವರಿಬ್ಬರ ಮದುವೆ 2016 ರಲ್ಲಿ ಆಗಿದ್ದು, ಈ ಸಂಬಂಧ ಮದುವೆ ಮಾತುಕತೆ ಮಣಿಗೆರೆ ಗ್ರಾಮದಲ್ಲಿ ಚಾಸಾ.1 ರವರ ಚಿಕ್ಕಮ್ಮನ ಮನೆಯಲ್ಲಿ ನಡೆಯಿತು. ಮಾತುಕತೆಗೆ ಆರೋಪಿ ಕಡೆಯಿಂದ 4-5 ಜನ ಹಾಗೂ ಅವರ ತಂದೆ ಬಂದಿದ್ದರು, ಚಾಸಾ.1 ರವರ ಕಡೆಯಿಂದ ತಂದೆ, ಚಿಕ್ಕಪ್ಪ ರಾಚಯ್ಯ ಬಂದಿದ್ದರು. ನಾನು ಮಾತುಕತೆಗೆ ಹೋಗಿದ್ದೆ. ಮಾತುಕತೆಯಲ್ಲಿ ಹುಡುಗನಿಗೆ ಕೊರಳ ಚೈನು, ಉಂಗುರ, ಬೈಕು ತೆಗೆದುಕೊಳ್ಳಲು ರೂ.50,000/- ನಗದು ಹಣ ಕೊಡಬೇಕು, ಹುಡುಗಿಗೆ 200 ಗ್ರಾಂ ಚಿನ್ನದ ಒಡವೆಗಳನ್ನು ಹಾಕಬೇಕೆಂದು ಮಾತುಕತೆ ನಡೆಯಿತು. ಮದುವೆಯನ್ನು ಕೆ.ಎಂ.ದೊಡ್ಡಿ ಬಾಲಾಜೀ ಸಮುದಾಯ ಭವನದಲ್ಲಿ

ಮಾಡಿಕೊಡಬೇಕೆಂದು ಹೇಳಿದ್ದರು. ಕೊರಳ ಚೈನು ಹಾಗೂ ಉಂಗುರ ಹಾಗೂ ರೂ.50,000/- ಹಣ ಮದುವೆಯ ಮೊದಲೇ ಚಾಸಾ.1 ರವರ ತಂದೆ ಕೊಟ್ಟಿದ್ದರು.

2. ಮದುವೆಯಾದ ನಂತರ ಅವರಿಬ್ಬರ ನೆಲಮಾಕನಹಳ್ಳಿ ಆರೋಪಿಯ ಮನೆಯಲ್ಲಿ ವಾಸ ಇದ್ದರು. ಆ ಸಮಯದಲ್ಲಿ ಆರೋಪಿ ಸ್ವಂತವಾಗಿ ಅಂಗಡಿ ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದರು. ಆ ಸಮಯದಲ್ಲಿ ಇಬ್ಬರೂ ಬಹಳ ಚೆನ್ನಾಗಿದ್ದರು, ಅವರಿಗೆ ಒಂದು ಗಂಡು ಮಗು ಜನಿಸಿತ್ತು. 2-3 ವರ್ಷಗಳು ಚೆನ್ನಾಗಿದ್ದರು.

3. ನಂತರದ ದಿನಗಳಲ್ಲಿ ಆರೋಪಿಗೆ ಅಂಗಡಿ ವ್ಯಾಪಾರದಲ್ಲಿ ನಷ್ಟ ಉಂಟು ಆಗಿದೆ, ತವರು ಮನೆಯಿಂದ ಹಣ ತೆಗೆದುಕೊಂಡು ಬಾ ಎಂದು ಜಗಳ ಮಾಡುತ್ತಿದ್ದರು. ಈ ವಿಚಾರವನ್ನು ಚಾಸಾ.1 ರವರು ತವರು ಮನೆಗೆ ಬಂದು ಹೇಳುತ್ತಿದ್ದಳು. 1 ನೇ ಆರೋಪಿ ಚಾಸಾ.1 ರವರ ತವರು ಮನೆಗೆ ಬಂದಿದ್ದಾಗ ಆಕೆಯ ತಂದೆ ತಾಯಿ ಹಾಗೂ ನಾನು ಆತನಿಗೆ ಬುದ್ಧಿ ಹೇಳುತ್ತಿದ್ದೆವು. 1 ನೇ ಆರೋಪಿ ಆಕೆಯನ್ನು ಕರೆದುಕೊಂಡು ಹೋಗುತ್ತೇನೆಂದು ಹೇಳಿದ, ಆದರೆ ಚಾಸಾ.1 ರವರ ತಂದೆ ನಾನೇ ಕರೆದುಕೊಂಡು ಬರುತ್ತೇನೆಂದು ಹೇಳಿದರು.

4. ಸುಮಾರು 6 ತಿಂಗಳು ಕಳೆದ ಮೇಲೆ ಚಾಸಾ.2 ಹಾಗೂ 3 ರವರು ಚಾಸಾ.1 ರವರನ್ನು ಆರೋಪಿತರ ಮನೆಗೆ ಕರೆದುಕೊಂಡು ಹೋದರು. ಆಗ ಆಕೆಗೆ ಆರೋಪಿತರು ಸೀಮೆಎಣ್ಣೆ ಸುರಿದು ಆಕೆಯನ್ನು ಮಳವಳ್ಳಿ ಸರ್ಕಾರಿ ಆಸ್ಪತ್ರೆಗೆ ತಂದಿರುವುದಾಗಿ ವಿಷಯ ತಿಳಿದು ನಾನು ಆಸ್ಪತ್ರೆಗೆ ಹೋದೆ.

5. ನಂತರ ಆರೋಪಿತರ ವಿರುದ್ಧ ಚಾಸಾ.1 ರವರು ದೂರನ್ನು ಪೊಲೀಸರಿಗೆ ನೀಡಿರುತ್ತಾಳೆ. ಈ ಎಲ್ಲಾ ವಿಚಾರ ಕುರಿತು ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದರು. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಗುರುತಿನ ಬಗ್ಗೆ ಯಾವುದೇ ತಕರಾರು ಇಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

1. ಚಾಸಾ.1 ರವರು ಆರೋಪಿತರ ಮತ್ತು ಅಕ್ಕನ ವಿರುದ್ಧ ಮಳವಳ್ಳಿ ನ್ಯಾಯಾಲಯದಲ್ಲಿ ಭಾಗಾಂಶ ಕೇಳಿ ಕೇಸು ಹಾಕಿರುವ ವಿಚಾರ ನನಗೆ ಗೊತ್ತು ಎಂದರೆ ಸರಿ. ಚಾಸಾ.1 ರವರು 1 ನೇ ಆರೋಪಿ ವಿರುದ್ಧ ಜೀವನಾಂಶ ಕೇಳಿ ಮಳವಳ್ಳಿ ನ್ಯಾಯಾಲಯದಲ್ಲಿ ಭಾಗಾಂಶ ಕೇಳಿ ಕೇಸು ಹಾಕಿದ್ದಾಳೆ ಎಂದರೆ ನನಗೆ ಗೊತ್ತು. ಎರಡೂ ಕೇಸುಗಳು ಈಗಲೂ ನಡೆಯುತ್ತಿದೆ.

2. ಚಾಸಾ.1 ರವರ ಮನೆತನಕ್ಕೆ ಹೋಲಿಸಿ ನೋಡಿದರೆ ಆರೋಪಿತರು ಆರ್ಥಿಕವಾಗಿ ಚೆನ್ನಾಗಿದ್ದಾರೆಂದರೆ ಇಬ್ಬರೂ ಚೆನ್ನಾಗಿದ್ದಾರೆ. ಮಾತುಕತೆ ಸಮಯದಲ್ಲಿ 1 ನೇ ಆರೋಪಿ ತಂದೆಯೊಂದಿಗೆ 4-5 ಜನರು ಬಂದಿದ್ದು ಆ ಸಮಯದಲ್ಲಿ ನಾನು ಯಾರು ಎಂದು ಪರಿಚಯ ಮಾಡಿಕೊಂಡಿರಲಿಲ್ಲ. ಮದುವೆಯ ಜವಾಬ್ದಾರಿ ಚಾಸಾ.2 ರವರು ತೆಗೆದುಕೊಂಡಿದ್ದು ನನ್ನ ಜವಾಬ್ದಾರಿ ಆಗಿರಲಿಲ್ಲ ಆದರೆ ಮದುವೆ ಓಡಾಡಿದ್ದೆ.

3. ಚಾಸಾ.2 ರವರು ಒಡವೆಗಳನ್ನು ಎಲ್ಲಿ ಮಾಡಿಸಿದ್ದರು ಅದರ ಬಗ್ಗೆ ರಶೀದಿ ಇವುಗಳ ಬಗ್ಗೆ ನನಗೆ ಗೊತ್ತಿಲ್ಲ. ಒಡವೆ ಕೊಡುವ ಸಮಯದಲ್ಲಿ ಒಡವೆ ಕೊಡುವ ಸಮಯದಲ್ಲಿ ಫೋಟೋ ವಿಡಿಯೋ ತೆಗೆದಿರಲಿಲ್ಲ. ಯಾವ ಸಮಕ್ಷಮದಲ್ಲಿ ಚಾಸಾ.2 ರವರು ಒಡವೆಗಳನ್ನು ಕೊಡಲಾಗಿತ್ತು ಎಂಬ ಬಗ್ಗೆ ನನ್ನ ಹೇಳಿಕೆಯಲ್ಲಿ ಹೇಳಿಲ್ಲ. ಮುಂದುವರೆದು ಮಾತುಕತೆಯಲ್ಲಿ ನಾನು ಇದ್ದ ಬಗ್ಗೆ ಹೊರತುಪಡಿಸಿ ಬೇರೆ ವಿಷಯ ನನಗೆ ಗೊತ್ತಿಲ್ಲ.

4. ಆರೋಪಿತರು ಚಾಸಾ.1 ರವರ ಮೇಲೆ ಗಲಾಟೆ ಮಾಡುತ್ತಿದ್ದ ಬಗ್ಗೆ ಚಾಸಾ.1 ರಿಂದ 3 ಆಗಲೀ ಅಥವಾ ನಾನಾಗಲೀ ಪೊಲೀಸರಿಗೆ ದೂರು ಕೊಟ್ಟಿರಲಿಲ್ಲ. ಮಹಿಳಾ ಸಾಂತ್ವನ ಕೇಂದ್ರಕ್ಕೆ ದೂರು ಕೊಟ್ಟಿದ್ದರು, ಯಾವಾಗ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ನ್ಯಾಯ ಪಂಚಾಯಿತಿ ಸೇರಿದಾಗ ಆರೋಪಿತರಿಂದ ಯಾವುದೇ ಮುಚ್ಚಳಿಕೆ ಬರೆಸಿಕೊಂಡಿರಲಿಲ್ಲ. ಆರೋಪಿಯ ಗ್ರಾಮಕ್ಕೆ ಹೋಗಿ ನಾನು ಅವರಿಗೆ ಬುದ್ದಿ ಹೇಳುವ ಕೆಲಸ ಮಾಡಿರಲಿಲ್ಲ.

5. ಮಾತುಕತೆಯಲ್ಲಿ ವರದಕ್ಷಿಣೆ ಹಣ ಹಾಗೂ ಒಡವೆಗಳನ್ನು ಕೇಳಿರಲಿಲ್ಲ, ಅದನ್ನು ಚಾಸಾ.2 ರವರು ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ನಾವ್ಯಾ ಯಾರೂ ಮಣಿಗೆರೆಯಲ್ಲಿ ಮಾತುಕತೆಗೆ ಸೇರಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಆರ್ಥಿಕವಾಗಿ ಸದೃಢರಾಗಿದ್ದು ಅವರೇ ಮದುವೆ ಖರ್ಚು ವಹಿಸಿಕೊಂಡು ಮದುವೆ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಚಾಸಾ.1 ರವರಿಗೆ ಮದುವೆಯಾದ ನಂತರ 1 ನೇ ಆರೋಪಿಯ ತಂದೆಯ ಆರೋಗ್ಯ ಕ್ಷೀಣಿಸಿದ್ದು, ಲಕ್ವ ಹೊಡೆದು 2 ವರ್ಷ ಹಾಸಿಗೆ ಹಿಡಿದಿದ್ದರು ಎಂದರೆ ಸರಿ. ಹಾಸಿಗೆ ಹಿಡಿದಿದ್ದಾಗ ಚಾಸಾ.1 ರವರ ಸೇವೆ ಮಾಡಬೇಕೆಂಬ ದೃಷ್ಟಿಯಿಂದ ತವರು ಮನೆಗೆ ಬಂದಿದ್ದಳು ಎಂದರೆ ಸರಿಯಲ್ಲ. ಮಾವ ತೀರಿಕೊಂಡಾಗ ಚಾಸಾ.1 ರವರು ಅಲ್ಲಿಗೆ ಬರಲಿಲ್ಲ ತಾಯಿಯ

ಮನೆಯಲ್ಲಿದ್ದಳು ಎಂದರೆ ಸರಿಯಲ್ಲ. ಸಿಟಿಯಲ್ಲಿ ಓದಿಸಬೇಕೆಂದು ಚಾಸಾ.1 ರವರು 1 ನೇ ಆರೋಪಿಗೆ ಪೀಡಿಸುತ್ತಿದ್ದಳು ಎಂದರೆ ಸರಿಯಲ್ಲ. ವಯಸ್ಸಾದ ತಂದೆ ತಾಯಿಯನ್ನು ನೋಡಿಕೊಳ್ಳಬೇಕೆಂದು ಹೇಳಿದ್ದರಿಂದ ಚಾಸಾ.1 ರವರು ತವರು ಮನೆಯಲ್ಲಿಯೇ ಉಳಿದುಕೊಂಡಿದ್ದಳು ಎಂದರೆ ಸರಿಯಲ್ಲ. ಚಾಸಾ.1 ರವರಿಗೆ ವರದಕ್ಷಿಣೆ ಕಿರುಕುಳ ನೀಡಿರಲಿಲ್ಲ ಆಕೆಯನ್ನು ಮನೆಯಿಂದ ಆಚೆ ಹಾಕಿರಲಿಲ್ಲ, ಆಕೆಯೇ ಸ್ವಇಚ್ಛೆಯಿಂದ ತವರು ಮನೆಯಲ್ಲಿದ್ದಳು ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆಯದೇ ಇದ್ದರೂ ಸಿವಿಲ್ ಪ್ರಕರಣಗಳಿಗೆ ಅನುಕೂಲವಾಗಲೀ ಎಂಬ ದೃಷ್ಟಿಯಿಂದ ಈ ಸುಳ್ಳು ದೂರು ನೀಡಲಾಗಿದೆ ಎಂದರೆ ಸರಿಯಲ್ಲ. ಚಾಸಾ.1 ಹಾಗೂ 1 ನೇ ಆರೋಪಿ ನಡುವೇ ಯಾವತ್ತೂ ಜಗಳ ಆಗಿಲ್ಲ, ನಾವು ಯಾವತ್ತೂ ನ್ಯಾಯಪಂಚಾಯಿತಿ ನಡೆದಿಲ್ಲ ಎಂದರೆ ಸರಿಯಲ್ಲ. ಈ ಎಲ್ಲಾ ವಿಷಯ ನನಗೆ ಗೊತ್ತಿದ್ದರೂ ಚಾಸಾ.1 ರವರು ನನ್ನ ನಾದಿನಿಯಾದ್ದರಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

(ಮರು ವಿಚಾರಣೆಃಇಲ್ಲ)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ನಿರ್ಮಲ ಕೆ.)

C/c 5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.